ಜೀವರಾಜ್‌ರವರನ್ನು ವಿಧಾನ ಸಭೆಯಲ್ಲಿ ಸರ್ಕಾರಿ ಮುಖ್ಯ ಸಚೇತರನ್ನಾಗಿ ನೇಮಕ ಮಾಡಲಾಗಿದೆ. ಎಂದು ಮಾನ್ಯ ಮುಖ್ಯಮಂತ್ರಿಯವರು ಪತ್ರದ ಮುಖೇನ ತಿಳಿಸಿರುತ್ತಾರೆಂದು ಈ ಮೂಲಕ ಪ್ರಕಟಿಸಲಾಗಿದೆ.

ಅಧ್ಯಕ್ಷರು ; ಗೌರವಾನ್ವಿತ ಸದಸ್ಯರೆ. ಇಲ್ಲಿಯವರೆಗೂ ಈ ಒಂದು ಸದನದ ಸಭಾಧ್ಯಕ್ಷರಾಗಿ ಅವಿರೋಧವಾಗಿ ಮತ್ತು ಎಲ್ಲರ ಒಮ್ಮತದ ಸಭಾಧ್ಯಕ್ಷರನ್ನಾಗಿ ನನ್ನನ್ನು ತಾವು ಆಯ್ಕೆ ಮಾಡಿದ್ದೀರಿ ಮತ್ತು ಆಡಳಿತ ಮತ್ತು ವಿರೋಧ ಪಕ್ಷದ ಎಲ್ಲಾ ಹಿರಿಯ ಸದಸ್ಯರು ಅಭಿನಂದನೆಗಳನ್ನು ಸಲ್ಲಿಸಿದ್ದೀರಿ. ತಮ್ಮ ಭಾವನೆಗಳನ್ನು ಹಂಚಿಕೊಂಡಿದ್ದೀರಿ. ಮೊಟ್ಟಮೊದಲು ಈ 13ನೇ ವಿಧಾನ ಸಭೆಯ ಅಧ್ಯಕ್ಷ ಸ್ಥಾನಕ್ಕೆ ನನ್ನನ್ನು ಅವಿರೋಧವಾಗಿ ಆಯ್ಕೆ ಮಾಡಿದ್ದಕ್ಕಾಗಿ ತಮ್ಮೆಲ್ಲರಿಗೂ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ. ನಾನು ಈ ಸಭೆಯ 17ನೇ ಅಧ್ಯಕ್ಷನಾಗಿದ್ದು ನನ್ನ ಪೂರ್ವದಲ್ಲಿ ಕೆಲಸ ಮಾಡಿರುವ ಎಲ್ಲಾ ಅಧ್ಯಕ್ಷರ ಕೊಡುಗೆಗಳನ್ನು ಸ್ಮರಿಸಬಯಸುತ್ತೇನೆ. ಇಂದಿನ ಈ ಸರ್ವಾನುಮತದಿಂದ ಆಯ್ಕೆಗೆ ಕಾರಣಕರ್ತರಾದ ಮಾನ್ಯ ಮುಖ್ಯಮಂತ್ರಿಗಳು. ಮಾನ್ಯ ವಿರೋಧಪಕ್ಷದಲ್ಲಿರುವ ಎಲ್ಲಾ ನಾಯಕರಿಗೂ ಮತ್ತು ಗೌರವಾನ್ವಿತ ಸದಸ್ಯರಿಗೂ ನಾನು ಋಣಿಯಾಗಿರುತ್ತೇನೆ. ಈ ಸಭೆಯ ಸಾರ್ವಭೌಮತ್ವವನ್ನು ಮತ್ತು ಘನತೆಯನ್ನು ಎತ್ತಿಹಿಡಿಯುವುದು ನಮ್ಮೆಲ್ಲರ ಪ್ರಥಮ ಕರ್ತವ್ಯ. ಈ ಕರ್ತವ್ಯದಲ್ಲಿ ನಾನು ಯಾವುದೇ ಚ್ಯುತಿ ಬಾರದಂತೆ ಹಾಗೂ ಸಭೆಯ ಒಳ್ಳೆಯ ಪರಂಪರೆಯನ್ನು ಕಾಪಾಡಿಕೊಂಡು ಬಂದಿರುವ ಹಿಂದಿನ ಅಧ್ಯಕ್ಷರುಗಳಾದಂಥ ಮಾನ್ಯ ಹೆಚ್. ಸಿದ್ದಯ್ಯ. ಎಸ್.ಆರ್.ಕಂಠಿ. ಪ್ರಮುಖವಾಗಿ ಮಾನ್ಯ ವೈಕುಂಠ ಬಾಳಿಗರವರು. ಎಸ್.ಡಿ. ಕೋಠಾವಳಿಯವರು. ಜಿ. ಬಣಕಾರ್‌ರವರು. ರಮೇಶ್ ಕುಮಾರ್, ಚಂದ್ರೇಗೌಡ. ಎಸ್.ಎಂ.ಕೃಷ್ಣರವರು ಇಂಥ ಗಣ್ಯ ವ್ಯಕ್ತಿಗಳು ಅಲಂಕರಿಸಿರುವ ಈ ಸ್ಥಾನವನ್ನು ತಾವೆಲ್ಲರೂ ಸೇರಿ ನನಗೆ ಒದಗಿಸಿಕೊಟ್ಟಿರುತ್ತೀರಿ. ಈ ದಿಶೆಯಲ್ಲಿ ಈ ಸ್ಥಾನಕ್ಕೆ ನನ್ನಿಂದ ಯಾವುದೇ ರೀತಿಯಾದ ಚ್ಯುತಿಯಾಗದಂತೆ ನಡೆದುಕೊಳ್ಳುವ ಆಶ್ವಾಸನೆಯನ್ನು ತಮಗೆ ನೀಡಲು ಇಚ್ಚಿಸುತ್ತೇನೆ. ಸದನದ ಗೌರವ–ಘನತೆ ಸತ್ಸಂಪ್ರದಾಯಗಳನ್ನು ಕಾಪಾಡಿಕೊಂಡು ಹೋಗುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ರಾಷ್ಟ್ರದ ಅತ್ಯುನ್ನತ ಸಂವಿಧಾನ ಬುನಾದಿಯಾದ ಸಂಸತ್ತಿನಲ್ಲಿ ಉತ್ತಮ ಸಂಸದೀಯರಾದಂಥ ಅತ್ಯಂತ ಮೇಧಾವಿಗಳು ಸಂವಿಧಾನ ಪರಿಣಿತರಾದ ವಿಠಲ್ ಭಾಯ್ ಪಟೇಲ್‌ರವರು ಹಾಗೂ ಲೋಕಸಭೆಯ ಪ್ರಥಮ ಅಧ್ಯಕ್ಷರಾದ ಶ್ರೀ ಮಾವಳಂಕರ್‌ರವರು ಅಧ್ಯಕ್ಷ ಪೀಠವನ್ನಲಂಕರಿಸಿ ಕೀರ್ತಿ. ಶ್ರೇಷ್ಟತೆಗಳೊಂದಿಗೆ ಕಲಾಪಗಳನ್ನು ಸಮರ್ಪಕವಾಗಿ ನಿರ್ವಹಿಸಿ, ಒಳ್ಳೆಯ ಪರಂಪರೆಯನ್ನು ನೀಡಿ ಮಾರ್ಗದರ್ಶನವನ್ನು ಇಟ್ಟಿರುತ್ತಾರ. ಈ ಸಭೆಯ ಅಧ್ಯಕ್ಷ

ಸ್ಥಾನವನ್ನು ನಾನು ನ್ಯಾಯಮೂರ್ತಿ ಪೀಠವೆಂದು ಭಾವಿಸಿ. ಈ ಅವಧಿಯಲ್ಲಿ ಪ್ರತಿಯೊಬ್ಬ ಸದಸ್ಯರ ವಿಚಾರಗಳನ್ನು ಚರ್ಚಿಸಲು ಅವಕಾಶವನ್ನು ಕೊಟ್ಟು, ಯಾವುದೇ ಪಕ್ಷಪಾತವಿಲ್ಲದೆ ನನ್ನ ಕರ್ತವ್ಯವನ್ನು ಅತ್ಯಂತ ನಿಷ್ಪೆಯಿಂದ ನಿರ್ವಹಿಸುತ್ತೇನೆಂಬ ಭರವಸೆಯನ್ನು ಈ ಮೂಲಕ ನೀಡುತ್ತಿದ್ದೇನೆ. ಈ ಅಧ್ಯಕ್ಷ ಪೀಠದಿಂದ ಎಲ್ಲರನ್ನೂ ಸಮಾನವಾಗಿ ನೋಡಿ ಈ ಸದನದಲ್ಲಿ ಎಲ್ಲರೂ ಒಂದೇ ಎನ್ನುವ ಭಾವನೆಯನ್ನು ಹಾಗೂ ಇದೊಂದು ಅನುಭವ ಮಂಟಪವೆಂದು ಭಾವಿಸಿ ನನ್ನ ಕರ್ತವ್ಯವನ್ನು ನಿರ್ವಹಿಸಬಯಸುತ್ತೇನೆ. ಮೇಲೆ ಹೇಳಿದ ಹಾದಿಯಲ್ಲಿ ಮುಂದುವರೆಸಿಕೊಂಡು ಹೋಗತಕ್ಕಂಥ ಜವಾಬ್ದಾರಿ ನನ್ನೊಬ್ಬನ ಮೇಲೆಯೇ ಇದೆಯೆಂದು ಭಾವಿಸುವುದಿಲ್ಲ. ಈ ಸಭೆಯ ಎಲ್ಲಾ ಸದಸ್ಯರ ಮೇಲೆ ಈ ಜವಾಬ್ದಾರಿ ಇದೆ. ಹೊಣೆಗಾರಿಕೆ ಸಮಾನವಾಗಿ ಹಂಚಲ್ಪಟ್ಟಿದೆ ಎನ್ನುವ ಅಭಿಪ್ರಾಯ ನನ್ನದು. ಇಲ್ಲಿ ಬಹಳ ಮುಖ್ಯವಾಗಿ ನಾನು ಈ ಸದನದ ಸದಸ್ಯರ ಗಮನಕ್ಕೆ ತರುವಂಥದ್ದು ಏನೆಂದರೆ. ಇವತ್ತು ಆಡಳಿತರೂಢ ಪಕ್ಷ 116 ಸದಸ್ಯರನ್ನು ಹೊಂದಿ ಮತ್ತು ವಿರೋಧ ಪಕ್ಷ 108 ಸ್ಥಾನಗಳನ್ನು ಹೊಂದಿ ಅತ್ಯಂತ ಸಮಸಮವಾಗಿ ಇರುವಂಥ ಒಂದು ಸದನ ಎನ್ನುವಂಥದ್ದನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಏಕೆಂದರೆ ನಾನು 4ನೇ ಬಾರಿ ಆಯ್ಕೆಯಾಗಿ ಬಂದಂಥ ಸದಸ್ಯ. ನಾನು ಕಳೆದ ಹಲವಾರು ಸದನಗಳನ್ನು ನೋಡಿದ್ದೇನೆ. ಇಷ್ಟೊಂದು ನಿಕಟವಾಗಿ. ಅತ್ಯಂತ ಪ್ರಬಲವಾಗಿ ಇರುವಂಥ ಒಂದು ವಿರೋಧ ಪಕ್ಷ ಮತ್ತು ಅತ್ಯಂತ ಹೆಚ್ಚಿನ ಸದಸ್ಯರನ್ನು ಹೊಂದಿರುವ ಆಡಳಿತ ಪಕ್ಷ ಇವತ್ತು ಈ ರೀತಿಯಾದಂತ ನಿಕಟವಾದಂತ ಒಂದು ಸದನ ಬಹುಶಃ ನನ್ನ ಒಂದು ಅನುಭವದಲ್ಲಿ ಈ ರೀತಿ ಇದ್ದಂಥದ್ದನ್ನು ನಾನು ಪ್ರಥಮ ಬಾರಿ ನೋಡುತ್ತಿದ್ದೇನೆ. ಹೀಗಾಗಿ ಈ ಸದನವನ್ನು ನಡೆಸಿಕೊಂಡು ಹೋಗಲಿಕ್ಕೆ ನಾನು ಆಡಳಿತ ಪಕ್ಷ ಮತ್ತು ಪ್ರತಿಪಕ್ಷದ ಎಲ್ಲರ ಸಹಕಾರ ಬಹಳ ಅಗತ್ಯವೆನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈಗ ತಾನೆ ನಮ್ಮ ಹೊಸ ಶಾಸಕರು. ಅದರಲ್ಲೂ ಪ್ರಥಮವಾಗಿ ಆಯ್ಕೆಯಾದಂಥ ಶಾಸಕರು, ತಮ್ಮ ಭಾವನೆಗಳನ್ನು ಹಂಚಿಕೊಂಡಿದ್ದಾರೆ. 224 ಸದಸ್ಯರಲ್ಲಿ 90 ಜನ ಶಾಸಕರು ಪ್ರಥಮ ಬಾರಿಗೆ ಆಯ್ಕೆಯಾಗಿ ಬಂದಿದ್ದಾರೆ. ಇದು ಬಹಳ ಮಹತ್ವದ್ದು. ಕರ್ನಾಟಕದ ಜನತೆ ಇವ್ಹೊತ್ತು ಆಶೀರ್ವಾದ ಮಾಡಿ ನಿಮ್ಮೆಲ್ಲರನ್ನು ಇಲ್ಲಿಗೆ ಕಳುಹಿಸಿಕೊಟ್ಟಿದ್ದಾರೆ. ತಮ್ಮ ಕ್ಷೇತ್ರ ಇರಬಹುದು. ತಮ್ಮ ಭಾಗದ ಅಭಿವೃದ್ಧಿ ಇರಬಹುದು. ಮತ್ತು ಈ ಕರ್ನಾಟಕದ ಅಭಿವೃದ್ಧಿ ದೃಷ್ಟಿಯಿಂದ ಇಲ್ಲಿ ಚರ್ಚೆಯಾಗಬೇಕು. ಇದೊಂದು ಮಾತಿನ ಮಂಟಪ. ಇದರ ಮುಖಾಂತರ ಆ ಜನರ ಭಾವನೆಗಳನ್ನು ಇವತ್ತು

ಸರ್ಕಾರದ ಗಮನಕ್ಕೆ ತರುವಂಥಾದ್ದು ಮತ್ತು ಸರ್ಕಾರದ ಮುಖಾಂತರ ಆ ಜನತೆಗೆ ಒಳಿತು ಮಾಡುವಂಥ ಕೆಲಸ ಇವತ್ತು ಇಲ್ಲಿ ಆಗಬೇಕಾಗಿದೆ. ಅದಕ್ಕಾಗಿ ಇಲ್ಲಿ ಪಕ್ಷಾತೀತವಾಗಿ ಇವತ್ತು ಒಂದೊಂದು ರಾಜಕೀಯ ಪಕ್ಷವಿರುವುದರಿಂದ ಆ symbol ಮೇಲೆ ನಾವು ಆರಿಸಿ ಬಂದಿರುತ್ತೇವೆ. ಆದರೆ. ಇಲ್ಲಿ ಬಂದಮೇಲೆ ಕರ್ನಾಟಕದ ಜನತೆ ಇವೊತ್ತು ನಮಗೆ ಆಶೀರ್ವಾದ ಮಾಡಿದ್ದಾರೆ. ಆ ಒಂದು ಆಶೀರ್ವಾದಕ್ಕೆ ತಕ್ಕಂತೆ ನಾವು ಪ್ರತಿಯೊಬ್ಬರು ಋಣವನ್ನು ಕರ್ನಾಟದ ಜನತೆಗೆ ತೀರಿಸಬೇಕು. ಆ ದೃಷ್ಟಿಕೋನವನ್ನಿಟ್ಟುಕೊಂಡು ಇವತ್ತು ಗಂಭೀರವಾದಂಥ ಚರ್ಚೆ. ವೈಚಾರಿಕವಾದಂಥ ಚರ್ಚೆ. ಗುಣಾತ್ಮಕವಾದಂಥ ಚರ್ಚೆಯನ್ನು ನಾವಿಲ್ಲಿ ಮಾಡಿದರೆ ಅದರ ಮುಖಾಂತರ ನಾವು ಕರ್ನಾಟಕದ ಜನತೆಗೆ ನಮ್ಮ ಋಣವನ್ನು ಮುಟ್ಟಿಸಲಿಕ್ಕೆ ಸಾಧ್ಯವಿದೆ. ಆ ದಿಶೆಯಲ್ಲಿ ನಮ್ಮ ಎಲ್ಲಾ ಪಕ್ಷದ ಶಾಸಕರಿಗೆ ನಾನು ಈ ಸಂದರ್ಭದಲ್ಲಿ ಕಳಕಳಿಯ ಮನವಿ ಮಾಡುತ್ತಿದ್ದೇನೆ. ಬಹಳ ಮುಖ್ಯವಾಗಿ ನಾನು ಹಿಂದೆ ವಿರೋಧ ಪಕ್ಷದ ನಾಯಕನಾಗಿಯೂ ಕೆಲಸ ಮಾಡಿದ್ದೇನೆ. ಮತ್ತು Revenue Minister ಆಗಿಯೂ ಕೆಲಸ ಮಾಡಿದ್ದೇನೆ. ಆ ಸಂದರ್ಭದಲ್ಲಿ ಕೆಲವೊಂದು ಸಂದರ್ಭಗಳಲ್ಲಿ ನಾವು ಬಹಳಷ್ಟು ಸಾರ್ವಜನಿಕ ಮಹತ್ವದ ವಿಷಯಗಳನ್ನು ಬಿಟ್ಟು ಬೇರೆ ಬೇರೆ ಹಂತದ ಚರ್ಚೆಗಳಿಗೆ ಎಡೆಯಾಗಿದ್ದನ್ನು ನಾವಿಲ್ಲಿ ನೋಡಿದ್ದೇವೆ. ಅಂಥದ್ದಕ್ಕೆ ಅವಕಾಶವಾಗಲಾರದೆ ಸಂಯಮದಿಂದ ಯಾವುದೇ ಒಂದು ಭಾವೋದ್ವೇಗಕ್ಕೆ ಒಳಗಾಗಲಾರದೆ ನಾವು ಚರ್ಚೆಯಲ್ಲಿ ಭಾಗವಹಿಸಿದರೆ ಇವತ್ತು ಅದರಲ್ಲಿ ಪ್ರಥಮವಾಗಿ ಆರಿಸಿ ಬಂದಂಥ ಶಾಸಕರಿಗೆ ಇನ್ನೂ ಹೆಚ್ಚಿನ ಅವಕಾಶಗಳು ಸಿಗಲಿಕ್ಕೆ ಸಾಧ್ಯವಿದೆ. ಹೀಗಾಗಿ ನಾನೂ ಒಬ್ಬ ಸಭಾಧ್ಯಕ್ಷನಾಗಿ ಪಕ್ಷತೀತವಾಗಿ ಇವತ್ತು ಆಡಳಿತರೂಢ ಪಕ್ಷ ಮತ್ತು ವಿರೋಧ ಪಕ್ಷ ಎಲ್ಲರನ್ನೂ ಸಮಾನವಾಗಿ ಕಾಣುವಂಥ ಕೆಲಸವನ್ನು ಮಾಡಿಯೇ ಮಾಡುತ್ತೇನೆ ಮತ್ತು ಅದರಲ್ಲಿ ಹೊಸದಾಗಿ ಆರಿಸಿ ಬಂದಂಥ ಶಾಸಕರಿಗೆ ಇನ್ನೂ ಹೆಚ್ಚಿನ ಅವಕಾಶವನ್ನು ಕೊಡುವ ಪ್ರಯತ್ನವನ್ನು ನಾನು ಮಾಡುತ್ತೇನೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇವತ್ತು ಇಲ್ಲಿ ಬಹಳ ಮುಖ್ಯವಾಗಿ ಒಂದೆರಡು ವಿಷಯಗಳನ್ನು ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಈ ಒಂದು ಸದನದಲ್ಲಿ ಅನುಭವವಿದ್ದಂಥ ಹಿರಿಯ ನಾಯಕರು ನಮ್ಮ ಮುಂದಿದ್ದಾರೆ. ಮಾನ್ಯ ಯಡಿಯೂರಪ್ಪನವರು ಆರು ಸಲ ಆಯ್ಕೆಯಾಗಿ ಈ ಸದನಕ್ಕೆ ಬಂದಿದ್ದಾರೆ. ರೈತರ ಪರವಾದಂತಹ ಹೋರಾಟದ ಮುಖಾಂತರ ಸಾರ್ವಜನಿಕ ರಂಗದಲ್ಲಿ ತಮ್ಮ ಹೋರಾಟದ ಕೆಚ್ಚನ್ನು ಇವೊತ್ತು ಪ್ರಚುರಪಡಿಸಿ ಒಬ್ಬ ರೈತನ ಮಗನಾಗಿ ಎಲ್ಲಿಯವರೆಗೆಂದರೆ ನಗರ ಸಭೆ. ಪುರಸಭೆ ಅಧ್ಯಕ್ಷ ಸ್ಥಾನದಿಂದ ಇವತ್ತು ಎಲ್ಲಾ

ಹಂತವನ್ನೂ ದಾಟಿ ಕರ್ನಾಟಕ ಜನತೆಯ ಆಶೀರ್ವಾದದೊಂದಿಗೆ ಇವತ್ತು ಶ್ರೀ ಯಡಿಯೂರಪ್ಪನವರನ್ನು ಮುಖ್ಯಮಂತ್ರಿಯಾಗಿ ಪೀಠವನ್ನಲಂಕರಿಸಿದ್ದಾರೆ. ಬಹಳ ಮಹತ್ವದ್ದು. ಅಂದರೆ. ಕೆಳಹಂತದ. ಜನಪ್ರತಿನಿಧಿಗಳ ಒಂದು ವ್ಯವಸ್ಥೆಯಲ್ಲಿ ಒಬ್ಬ ವ್ಯಕ್ತಿ ಪುರಸಭೆಯಿಂದ ಮುಖ್ಯಮಂತ್ರಿ ಸ್ಥಾನಕ್ಕೆ ಬರುವುದು ಬಹಳ ಅಪರೂಪದ ಸಂಗತಿ. ಅಂಥದ್ದನ್ನು ಇವತ್ತು ಗಳಿಸಿದಂಥ ವ್ಯಕ್ತಿ ಯಡಿಯೂರಪ್ಪನವರ. ಅವರು ಇವೊತ್ತು ಸಭಾನಾಯಕರಾಗಿ ನಮ್ಮ ಮುಂದಿದ್ದಾರೆ. ಏಕೆಂದರೆ. ಬಹಳ ಕಡೆ ನೋಡಿದ್ದೇವೆ. ಕೇವಲ ಶಾಸಕರಾಗಿ ತಕ್ಷಣವೇ ಮುಖ್ಯಮಂತ್ರಿಯಾದಂಥವರನ್ನು ಬಹಳಷ್ಟು ಕಡೆ ನೋಡಿದ್ದೇವೆ. ಆದರೆ. ಹೋರಾಟದ ಹಿನ್ನೆಲೆಯಲ್ಲಿ ಬಂದಂಥ ವ್ಯಕ್ತಿ ಆ ರೈತರ ಬವಣೆಗಳನ್ನು ಅರ್ಥಮಾಡಿಕೊಂಡು. ಜನಸಾಮಾನ್ಯರನ್ನು ಅರ್ಥಮಾಡಿಕೊಂಡಂಥ ವ್ಯಕ್ತಿ ಇವತ್ತು ಉತ್ತಮವಾದಂಥ ಸರ್ಕಾರವನ್ನು ಕೊಡುವಂಥ ಅವಕಾಶ ಅವರಿಗಿದೆ. ಅದನ್ನು ಅವರು ಮಾಡುತ್ತಾರೆನ್ನುವಂಥ ಆಶಯವನ್ನು ನಾನು ವ್ಯಕ್ತಪಡಿಸುತ್ತಿದ್ದೇನೆ. ಅದೇ ರೀತಿ ವಿರೋಧ ಪಕ್ಷದ ನಾಯಕರಾದಂಥ ಮಲ್ಲಿಕಾರ್ಜುನ ಖರ್ಗೆಯವರು 9 ಸಲ ಇಲ್ಲಿ ಆರಿಸಿ ಬಂದಿದ್ದಾರೆ. ಬಹುಶಃ ನಮ್ಮ ಎಲ್ಲಾ ಸದಸ್ಯರಲ್ಲಿ ಅತ್ಯಂತ ಹೆಚ್ಚು ಸಲ ಆರಿಸಿ ಬಂದಂಥ ವ್ಯಕ್ತಿ ಮಲ್ಲಿಕಾರ್ಜುನ ಖರ್ಗೆಯವರು. ಅವರು ಹಿರಿಯ ಸದಸ್ಯರು. ಬಹಳ ಹಿಂದೆ ಅವರ ಜೊತೆ ನಾನೂ ಕೆಲಸ ಮಾಡಿದ್ದೇನೆ. ವಿರೋಧ ಪಕ್ಷದಲ್ಲಿದ್ದಂಥ ಸಂದರ್ಭದಲ್ಲಿ ನಾನು ಅವರ ಜೊತೆ ಕೆಲಸ ಮಾಡಿದ್ದೇನೆ. ಅವರು ಒಂದು ಸಲ ಆಡಳಿತ ಪಕ್ಷದಲ್ಲಿರಬಹುದು ಅಥವಾ ಅವರು ನಮ್ಮ ಜೊತೆಯೂ ಸಾಕಷ್ಟು ಸಲ ಕುಳಿತಿದ್ದಾರೆ. ಆ ಸಂದರ್ಭದಲ್ಲಿ. ನಾನು ನೋಡಿದ ಸಂದರ್ಭದಲ್ಲಿ ಇವೊತ್ತು ನಾನು ಕೆಲವರನ್ನು good parliamentarian ಎಂದು ಕರೆಯುತ್ತಾರೆ. ಆ good parliamentarian ರವರಲ್ಲಿ ಮಲ್ಲಿಕಾರ್ಜುನ ಖರ್ಗೆಯವರೂ ಒಬ್ಬರು ಎನ್ನುವ ಮಾತನ್ನು ನಾನು ಹೇಳುತ್ತೇನೆ. ಹೀಗಾಗಿ ಸಾಕಷ್ಟ ವಿಷಯಗಳನ್ನು ಅವರು ಅಧ್ಯಯನ ಮಾಡಿದ್ದು. ಅವರ ಅಧ್ಯಯನದಲ್ಲಿ ಒಂದು stuff ಇರುತ್ತದೆ. ಆ ರೀತಿ ವಿಷಯಗಳನ್ನು ಮಂಡನೆ ಮಾಡಿ ಇವತ್ತು ಜನಸಾಮಾನ್ಯರ ಭಾವನೆಗಳನ್ನು ಅರ್ಥಮಾಡಿಕೊಂಡು ಅವರನ್ನು represent ಮಾಡುವಂಥ ಕೆಲಸವನ್ನು ಹಿಂದೆಯೂ ಮಾಡಿದ್ದಾರೆ. ಇವೊತ್ತು ಮತ್ತು ಬರವಂಥ ದಿವಸಗಳಲ್ಲಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮಾಡುತ್ತಾರೆ. ಅವರೊಬ್ಬ ಅತ್ಯಂತ efficient ಎನ್ನುವಂಥ ಒಬ್ಬ ಪ್ರತಿಪಕ್ಷದ ನಾಯಕರಾಗಿ ಹಿಂದೆಯೂ ಕೆಲಸ ಮಾಡಿದ್ದಾರೆ.

ಮತ್ತೆ ಮುಂದೆಯೂ ಕೂಡ ಮಾಡುತಾರೆ ಎನ್ನುವಂಥ ಅನಿಸಿಕೆಗಳನ್ನು

ನಾನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತೇನೆ. ಒಂದು ಕಡೆ ಮಾನ್ಯ ಯಡಿಯೂರಪ್ಪನವರು ಮತ್ತೊಂದು ಕಡೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಇವರಿಬ್ಬರ ಜೊತೆಗೆ ಒಂದು ಟೀಂ ಇದೆ. ಮಾನ್ಯ ಸುರೇಶ್ ಕುಮಾರ್ ಇರಬಹುದು ಮಾನ್ಯ ಈಶ್ವರಪ್ಪನವರು ಇರಬಹುದು. ಡಾ: ಆಚಾರ್ಯರವರು. ಮಾನ್ಯ ಆರ್. ಅಶೋಕರ್‌ರವರು. ಮಾನ್ಯ ಕಾರಜೋಳ್‌ರವರು. ಮಾನ್ಯ ವಿಶ್ವೇಶ್ವರ ಹೆಗಡೆಯವರು. ಮಾನ್ಯ ಬೊಮ್ಮಾಯಿರವರು. ಸಾಕಷ್ಟು ಅನುಭವವಿರುವಂಥವರ ಟೀಂ ಆಡಳಿತ ಪಕ್ಷದಲ್ಲಿದೆ. ಅದೇ ರೀತಿ ವಿರೋಧ ಪಕ್ಷದಲ್ಲಿ ಕೂಡ ಮಾನ್ಯ ಖರ್ಗೆಯವರು ಇರಬಹುದು. ಮಾನ್ಯ ಟಿ.ಬಿ. ಜಯಚಂದ್ರ ಇರಬಹುದು. ನಂತರ ಮಾನ್ಯ ಸಿದ್ದರಾಮಯ್ಯನವರು. ಇವ್ರೊತ್ತು ಅವರೇಕೊ ಸದನಕ್ಕೆ ಬಂದಿಲ್ಲ. ಬರಬೇಕಾಗಿತ್ತು. ಮಾನ್ಯ ಸಿದ್ದರಾಮಯ್ಯನವರು. ಉಪಮುಖ್ಯಮಂತ್ರಿಗಳಾಗಿ ಕೆಲಸ ಮಾಡಿದಂಥವರು ಹಾಗೂ ಹಣಕಾಸು ಸಚಿವರಾಗುಗಿ ಕೆಲಸ ಮಾಡಿದಂಥವರು. ಅದೇ ರೀತಿಯಲ್ಲಿ ಯಂಗ್‌ಸ್ಟರ್ ನಿಂದ ಕೂಡಿರುವ ಯಂಗ್ ಟೀಂ ಕೂಡ ಇದೆ. ಡಾ: ಪರಮೇಶ್ವರ್ ಇರಬಹುದು. ಕೃಷ್ಣ ಬೈರೇಗೌಡರವರು ಇರಬಹುದು. ದಿನೇಶ್‌ರವರು ಇರಬಹುದು. ಅದೇ ರೀತಿ ಹಿರಿಯರಾದ ಅನುಭವಿಗಳಾದ ಶ್ರೀ ಶ್ರೀನಿವಾಸ್ ಪ್ರಸಾದ್ ರವರು ಇರಬಹುದು. ಸಾಕಷ್ಟ ಅನುಭವ ಇರುವಂಥವರು ಪ್ರತಿಪಕ್ಷದ ಸ್ಥಾನದಲ್ಲಿ ಕುಳಿತಿದ್ದಾರೆ. ಸಾಕಷ್ಟು ಅನುಭವ ಇರುವಂಥವರು ಇದ್ದಾರೆ. ನಾನು ಅವರ ಹೆಸರುಗಳನ್ನು ಹೇಳಿಲ್ಲವೆಂದು ಯಾರೂ ತಪ್ಪು ತಿಳಿದುಕೊಳ್ಳಬಾರದು. ನಾನು ಕೆಲವು ಹೆಸರುಗಳನ್ನು ಮಾತ್ರ ಮೆನ್ಸ್‌ನ್ ಮಾಡಿದ್ದೇನೆ. ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳಿಬ್ಬರೂ ಕೂಡಿಕೊಂಡು ಜನತೆಯ ಹಿತವನ್ನು ಬಯಸಬೇಕಾಗಿದೆ. ಈ ನಿಟ್ಟಿನಲ್ಲಿ ಈ ಸದನಕ್ಕೆ ಗೌರವವನ್ನು ತರುವಂಥ ಕೆಲಸ ನಾವು ಮಾಡಬೇಕಾಗಿದೆ. ಈ ಒಂದು ಅನುಭವದ ಹಿನ್ನೆಲೆಯಲ್ಲಿ ಸದನವನ್ನು ನಡೆಸುವಂಥದ್ದು ಆಗಬೇಕು ಮತ್ತು ಅದಕ್ಕೆ ಎಲ್ಲರಿಗೂ ಸಹಕಾರವನ್ನು ಕೊಡುವಂಥ ಕೆಲಸವನ್ನು ನಾನು ಮಾಡುತ್ತೇನೆ. ಮತ್ತೊಂದು ಅಂಶ ಏನೆಂದರೆ ಇಲ್ಲಿ ಒಂದು ಕೊರತೆಯಾಗಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಹಿಂದೆ ನಾವು ನೋಡಿದ ಹಾಗೆ ಕೆಲವು ಪ್ರಮುಖ ನಾಯಕರು ಇವ್ರೊತ್ತು ಆಯ್ಕೆಯಾಗಿ ಬಂದಿಲ್ಲ. ಮಾನ್ಯ ವಾಟಾಳ್ ನಾಗರಾಜ್‌ರವರು. ಮಾನ್ಯ ಮಾಧುಸ್ವಾಮಿಯವರು. ಇವ್ರೊತ್ತು ಅವರು ನಮ್ಮ ಜೊತೆಗೆ ಇಲ್ಲ. ಅವರು ಸದನದಲ್ಲಿ ಇಲ್ಲ. ಆದರೆ ಅಂಥವರು ಇವ್ರೊತ್ತು ಈ ಸದನದಲ್ಲಿ ಇದ್ದಿದ್ದರೆ ಹೆಚ್ಚಿನ ಲವಲವಿಕೆ ಇರುತ್ತಿತ್ತು. ಬಹಳಷ್ಟು ಪ್ರಮುಖ ನಾಯಕರು ಇಲ್ಲ. ಮಾನ್ಯ ಎಂ.ಪಿ. ಪ್ರಕಾಶ್‌ರವರು ಇರಬಹುದು. ನಾನು ಈ ಹೆಸರುಗಳನ್ನು ಪಾರ್ಲಿಮೆಂಟ್ರಿ ಪ್ರಾಕ್ಟೀಸ್

ದೃಷ್ಟಿಯಿಂದ ರೆಫೆರೆನ್ಸ್ ಮಾಡುತ್ತಿದ್ದೇನೆ. ಇವೊತ್ತು ಅವರ ವಿರುದ್ದ ಆಯ್ಕೆಯಾಗಿ ಇಲ್ಲಿ ಬಂದು ಕುಳಿತಿರುವ ಸದಸ್ಯರು ತಪ್ಪಾಗಿ ತಿಳಿದುಕೊಳ್ಳಬಾರದು. ಜನತೆ ತೀರ್ಮಾನಿಸಿ ಆಶೀರ್ವಾದ ಮಾಡಿದ್ದಾರೆ. ಹೀಗಾಗಿ ತಾವೆಲ್ಲರೂ ಇಲ್ಲಿಗೆ ಬಂದಿದ್ದಾರೆ. ಆದರೆ. ಅವರು ಏಕೆ ಬಂದಿಲ್ಲ ಎನ್ನುವುದು ಬೇರೆ ಬೇರೆ ಕಾರಣಗಳ ಸಲುವಾಗಿ. ಚುನಾವಣೆ ವ್ಯವಸ್ಥೆಯೊಳಗೆ ಅವರು ಇವೊತ್ತು ಬಂದಿಲ್ಲ. ಆದರೆ. ಅವರ ಹೆಸರುಗಳನ್ನು ಏಕೆ ರೆಫೆರೆನ್ಸ್ ಮಾಡುತ್ತಿದ್ದೇನೆಂದರೆ. ಅವರ ಅನುಭವದ ಹಿನ್ನೆಲೆಯ ಸಲುವಾಗಿ ನಾನು ಅವರ ಹೆಸರುಗಳನ್ನು ಇಲ್ಲಿ ರೆಫೆರೆನ್ಸ್ ಮಾಡುತ್ತಿದ್ದೇನೆ. ಅನುಭವದ ಹಿನ್ನೆಲೆಯಲ್ಲಿ ಈ ಸದನವನ್ನು ಮುನ್ನಡೆಸುವಂಥ ಕೆಲಸವನ್ನು ನಾವೆಲ್ಲರೂ ಸೇರಿ ಮಾಡೋಣ. ಹೊಸದಾಗಿ ಆಯ್ಕೆಯಾಗಿ ಬಂದಿರತಕ್ಕಂಥ ಶಾಸಕರಿಗೆ ಒಂದು ತರಬೇತಿಯನ್ನು ನೀಡಬೇಕೆನ್ನುವ ಚಿಂತನೆಯನ್ನು ನಾನು ಮಾಡಿದ್ದೇನೆ. ಹಿಂದೆಯೂ ಕೂಡ ಆ ಒಂದು ವ್ಯವಸ್ಥೆಯಿತ್ತು. ಮಾನ್ಯ ರಮೇಶ್ ಕುಮಾರ್ ಅವರು ಸ್ಪೀಕರ್ ಆಗಿದ್ದಂಥ ಸಂದರ್ಭದಲ್ಲಿ ಹೊಸದಾಗಿ ಆಯ್ಕೆಯಾಗಿರತಕ್ಕಂಥ ಸದಸ್ಯರಿಗೆ ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಮತ್ತು ವಿಧಾನ ಮಂಡಲದ ವ್ಯವಸ್ಥೆಯಲ್ಲಿ ಹೊಸ ಸದಸ್ಯರಿಗೆ ತರಬೇತಿಯನ್ನು ಕೊಡುವಂಥ ಕೆಲಸವನ್ನು ಮಾಡಿದ್ದರು. ನಾನೂ ಕೂಡ ಆ ನಿಟ್ಟಿನಲ್ಲಿ ಯೋಚಿಸಿದ್ದೇನೆ. ನಾನು ಈಗಾಗಲೇ ಕೆಲವು ಹೆಸರುಗಳನ್ನು ಹೇಳಿದೆ. ಮಾಜಿ ಮುಖ್ಯಮಂತ್ರಿಗಳು ಇವೊತ್ತು ಇಲ್ಲಿ ಇದ್ದಾರೆ. ಮಾನ್ಯ ಹೆಚ್.ಡಿ.ಕುಮಾರ್ ಸ್ವಾಮಿಯವರು. ಇವರು ಕೇವಲ ಎರಡನೇ ಸಲ ಆಯ್ಕೆಯಾದರೂ ಕೂಡ ರಾಜಕೀಯದ ಅನುಭವ ಇದೆ. ಅವರು ಸಾಕಷ್ಟು ವಿಚಾರಗಳನ್ನು ಈ ಸದನದಲ್ಲಿ ಮಂಡಿಸಬಹುದು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನೂ ಹಲವಾರು ವಿಚಾರಗಳ ಬಗ್ಗೆ ಹೇಳುವುದಾದರೆ. ನಮ್ಮ ಸದಸ್ಯರು ಬಹಳಷ್ಟು ಭಾವನೆಗಳನ್ನು ಹೇಳಿಕೊಂಡರು. ಒಂದು ಏನಾಯಿತು ಎಂದರೆ. ಈ ಒಂದು ಸಭಾಧ್ಯಕ್ಷರ ಸ್ಥಾನವನ್ನು ಅಲಂಕರಿಸುವಂಥ ಸಂದರ್ಭದಲ್ಲಿ ಕಳೆದ ನಾಲ್ಕೈದು ದಿವಸಗಳ ಕಾಲ ಒಂದಿಷ್ಟು ಚರ್ಚೆಗೆ ಗ್ರಾಸವಾಗಿದ್ದ ವಿಚಾರ ತಮ್ಮಲ್ಲರಿಗೂ ಗೊತ್ತಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಕೂಡ ಅದನ್ನು ರೆಫೆರೆನ್ಸ್ ಮಾಡಿದರು. ನಾನು ಸ್ವಂತ ಮನಸ್ಸಿನಿಂದ ಯಾವುದೇ ಒಂದು ಜವಾಬ್ದಾರಿಯನ್ನು ಕೊಟ್ಟಾಗ ಸಂತೋಷದಿಂದ ಸ್ವೀಕಾರ ಮಾಡುವಂಥ ಸ್ವಭಾವದವನು. ನನಗೆ ಇವೊತ್ತು ಈ ಜವಾಬ್ದಾರಿ ಸಿಕ್ಕಿದೆ. ಒಬ್ಬ ಪ್ರತಿನಿಧಿಗೆ ಇಷ್ಟೊಂದು ಅವಕಾಶಗಳು ಬಹುಶಃ ಬಹಳಷ್ಟು ಜನಗಳಿಗೆ ಸಿಗುವುದಿಲ್ಲ. ನಾನು ಮೊದಲನೆ ಬಾರಿಗೆ ಬಂದಾಗ ಶಾಸಕನಾಗಿ ಕೆಲಸ ಮಾಡಿದ್ದೆ. ಎರಡನೇ ಬಾರಿಗೆ ಬಂದಾಗ ವಿರೋಧ ಪಕ್ಷದ ನಾಯಕನಾಗಿ. ಮತ್ತು

ರಾಜ್ಯ ಬಿಜೆಪಿಯ ಅಧ್ಯಕ್ಷನಾಗಿ ಹಾಗೂ ಕಂದಾಯ ಸಚಿವನಾಗಿ ಕೆಲಸ ಮಾಡಿ ಇವೊತ್ತು ಸಭಾಧ್ಯಕ್ಷರ ಸ್ಥಾನವನ್ನು ಅಲಂಕರಿಸಿದ್ದೇನೆ. ಈ ರೀತಿಯಾದ ಜವಾಬ್ದಾರಿಗಳನ್ನು ಕೊಟ್ಟಂಥ ನನ್ನ ಎಲ್ಲಾ ಹಿರಿಯರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಬಹಳ ಸಂತೋಷದಿಂದ ಈ ಒಂದು ಸಭಾಧ್ಯಕ್ಷರ ಸ್ಥಾನವನ್ನು ಅಲಂಕರಿಸಿ ಈ ಜವಾಬ್ದಾರಿಯನ್ನು ನಿಭಾಯಿಸುವುದಕ್ಕೆ ನಾನು ಒಪ್ಪಿಕೊಂಡಿದ್ದೇನೆ. ಇದರಲ್ಲಿ ಯಾವುದು ಹಿಂದೆ ಮುಂದೆ ಎನ್ನುವುದು ಇಲ್ಲ. ಆ ರೀತಿಯ ಅಭಿಪ್ರಾಯಗಳು ಇದ್ದರೆ ಅವುಗಳು ಒಂದು ಹಂತಕ್ಕೆ ಇರುವಂಥ ಅಭಿಪ್ರಾಯಗಳು. ಅದಕ್ಕೆ ಅಂತ್ಯವನ್ನು ಹಾಡಬೇಕಾಗುತ್ತದೆ. ಈ ಸಭಾಧ್ಯಕ್ಷರ ಸ್ಥಾನ ಬಹಳ ಗೌರವ ಇರುವಂಥ ಸ್ಥಾನ. ಇದರ ಮೂಲಕ ಅಭಿವೃದ್ಧಿಯ ಪ್ರಶ್ನೆ ಬಂದಾಗ ಸಭಾಧ್ಯಕ್ಷರ ಸ್ಥಾನದಲ್ಲಿರುವ ನನಗೆ ಇವೊತ್ತು ಇಡೀ ಸದನದ ರಕ್ಷಣೆ ನನಗಿದೆ. ಹೀಗಾಗಿ ಅಭಿವೃದ್ಧಿ ಚಿಂತನೆಯನ್ನು ಮಾಡುವುದಿಲ್ಲ. ನಾನು ಅದನ್ನು ಸದನಕ್ಕೆ ಬಿಡುತ್ತೇನೆ. ಸರ್ಕಾರಕ್ಕೆ ಬಿಡುತ್ತೇನೆ. ನಮ್ಮ ಸಭಾನಾಯಕರಿಗೂ ಹಾಗೂ ನಮ್ಮ ವಿರೋಧ ಪಕ್ಷದ ನಾಯಕರುಗಳಿಗೆ ಬಿಡುತ್ತೇನೆ. ಅಭಿವೃದ್ಧಿ ಕಾಣದೆ ನಿರ್ಲಕ್ಷ್ಯತೆ ಒಳಗಾಗಿರುವ ಯಾವ ಪ್ರದೇಶಗಳು ರಾಜ್ಯದಲ್ಲಿ ಇವೆ. ಅಂಥ ಪ್ರದೇಶಗಳಿಗೆ ಹೆಚ್ಚಿನ ಒತ್ತು ಕೊಡಬೇಕೆನುವ ದೃಷ್ಟಿಕೋನದಿಂದ ಸರ್ಕಾರಕ್ಕೆ ಮತ್ತು ಸದನಕ್ಕೆ ಆ ಜವಾಬ್ದಾರಿಯನ್ನು ಕೊಟ್ಟು ನನಗೆ ಇಲ್ಲಿ ಪೂರ್ಣಪ್ರಮಾಣದ ಕೆಲಸ ಮಾಡಲಿಕ್ಕೆ ನಿಮ್ಮೆಲ್ಲರ ಸಹಾಯ ನನಗೆ ಮಾಡುತ್ತೀರಿ ಎಂದು ನಾನು ಹೇಳಬಯಸುತ್ತೇನೆ. ಇವೊತ್ತು ಈ ಸದನದಲ್ಲಿ ನೀವು ಎಲ್ಲರೂ ಅಭಿನಂದನೆಗಳನ್ನು ಸಲ್ಲಿಸಿದಿರಿ. ಅದಕ್ಕೆ ತಮಗೆಲ್ಲರಿಗೂ ಅಭಿನಂದನೆಗಳು. ನಿಮ್ಮೆಲ್ಲರ ಗೌರವಕ್ಕೆ ನಾನು ಅರ್ಹ ಇದ್ದೇನೋ ಇಲ್ಲವೋ. ಆದರೆ ಬಹಳಷ್ಟು ವಿಶ್ವಾಸವನ್ನು ನನ್ನ ಮೇಲೆ ಇಟ್ಟುಕೊಂಡು ಅಭಿನಂದನಾ ಭಾಷಣಗಳನ್ನು ತಾವು ಮಾಡಿದಿರಿ. ಅದನ್ನು ಸರಿಯಾಗಿ ಉಪಯೋಗಿಸಿಕೊಂಡು ಈ ಸದನದ ಅಧ್ಯಕ್ಷನಾಗಿ ಕಾರ್ಯನಿರ್ವಹಣೆ ಮಾಡುತ್ತೇನೆ ಎನ್ನುವ ವಿಶ್ವಾಸವನ್ನು ವ್ಯಕ್ತಪಡಿಸುತ್ತೇನೆ. ಏನೆಂದರೆ. ಸದನದಲ್ಲಿ ಚರ್ಚೆ ನಡೆದಂಥ ಸಂದರ್ಭದಲ್ಲಿ ಬಹಳಷ್ಟು ಶಾಸಕರು ಗಂಭೀರವಾದಂಥ ಚರ್ಚೆಗಳಿಗೆ ಒತ್ತು ಕೊಡುವುದಕ್ಕೆ ಸಾಕಷ್ಟು ಸ್ಟಡಿ ಮಾಡಿಕೊಂಡು ಬಂದು ಇಲ್ಲಿ ಚರ್ಚೆ ಮಾಡಿರುವುದನ್ನು ನಾನು ಈ ಹಿಂದೆ ಹಲವಾರು ಬಾರಿ ನೋಡಿದ್ದೇನೆ. ಆದರೆ. ಏನಾಗುತ್ತದೆ ಎಂದರೆ. ಪ್ರತಿಭಟನೆ ಮಾಡುವಂಥ ಸಂದರ್ಭದಲ್ಲಿ ಕಪ್ಪು ಬಟ್ಟೆಯನ್ನು ಹರಿದು ಹಾಕಲಾಗುವುದು. ಪೇಪರ್‌ಗಳನ್ನು ಹರಿದು ಹಾಕುವುದು. ಕುರ್ಚಿಯ ಮೇಲೆ ನಿಂತು ಪ್ರತಿಭಟನೆ ಮಾಡಿದಂಥ ಸುದ್ದಿಗಳು. ಐಟಂಗಳು ಬಹಳ ಹೈಲೈಟ್ ಆಗಿ. ಯಾರು ಗಂಭೀರವಾಗಿ

ಚರ್ಚೆಯಲ್ಲಿ ಭಾಗವಹಿಸುತ್ತಾರೆ ಅಂತಹ ವಿಷಯಗಳು ಹಾಗೂ ಅಂತಹ ವ್ಯಕ್ತಿಗಳ ಬಗ್ಗೆ ಹೆಚ್ಚು ಪ್ರಚಾರವಾಗಲಾರದೇ ಇವೊತ್ತು ಸದನಕ್ಕೆ ಮಹತ್ವ ಬರಲಿಕ್ಕೆ ಸಾಧ್ಯವಿಲ್ಲ. ಹೀಗಾಗಿ ನಾನು ಮತ್ತೊಮ್ಮೆ ಮಾಧ್ಯಮದ ಮಿತ್ರರಲ್ಲಿ ಸಭಾಧ್ಯಕ್ಷನಾಗಿ ವಿನಂತಿಸಿಕೊಳ್ಳುವುದೇನೆಂದರೆ. ಈ ಒಂದು ಸದನದಲ್ಲಿ ಗಂಭೀರವಾದ ಚರ್ಚೆಗಳಿಗೆ ತಾವು ಪ್ರಾಮುಖ್ಯತೆಯನ್ನು ಕೊಡಬೇಕೆಂದು ಎಲ್ಲಾ ಶಾಸಕರ ಪರವಾಗಿ ಕೇಳಿಕೊಳ್ಳುತ್ತೇನೆ. ಇದಕ್ಕೆ ತಾವು ಹೆಚ್ಚಿನ ಒತ್ತನ್ನು ಕೊಡಬೇಕೆನ್ನುವ ಮಾತನ್ನು ಹೇಳಿ. ನಾನು ಕೊನೆಯಲ್ಲಿ ತಮ್ಮಲ್ಲಿ ಒಂದು ವಿನಂತಿಯನ್ನು ಮಾಡಿಕೊಳ್ಳುವುದೇನೆಂದರೆ. ಸದನದಲ್ಲಿ ಇದ್ದಂಥ ಎಲ್ಲಾ ಶಾಸಕರಿಗೆ. ಅವರು ಹಿರಿಯರಿರಬಹುದು. ಹೊಸದಾಗಿ ಆಯ್ಕೆಯಾದಂಥ ಸದಸ್ಯರು ಇರಬಹುದು. ಎಲ್ಲರಿಗೂ ಸಮಾನವಾದ ಅವಕಾಶವನ್ನು ಕೊಡುವುದು. ಮತ್ತು ಪಕ್ಷಾತೀತವಾಗಿ ನಡೆದುಕೊಳ್ಳುವಂಥದ್ದನ್ನು ನಾನು ಮಾಡುತ್ತೇನೆ. ಅದಕ್ಕೆ ಎಲ್ಲರೂ ಸಹಕರಿಸಬೇಕು. ಮತ್ತು ತಮ್ಮಲ್ಲಿ ನಾನು ಒಂದು ವಿನಂತಿಯನ್ನು ಮಾಡುತ್ತಿದ್ದೇನೆ. ಏನೆಂದರೆ. ನಾನು ಈ ಹಿಂದೆಯೂ ಬಹಳ ಸಲ ನೋಡಿದ್ದೇನೆ. ಗೈರು ಹಾಜರಿ ಬಹಳ ಇರುತ್ತದೆ. ನಮ್ಮನ್ನು ಇಲ್ಲಿಗೆ ಕಳುಹಿಸಿರುವುದು ಕಾನೂನುಗಳನ್ನು ಮಾಡಲಿಕ್ಕೆ. ಕ್ಷೇತ್ರದ ಆ ಭಾಗದ ಜನರ ಸಮಸ್ಯೆಗಳನ್ನು ಇಲ್ಲಿ ಹೇಳುವುದಕ್ಕೆ ನಮ್ಮನ್ನು ಜನ ಇಲ್ಲಿಗೆ ಕಳುಹಿಸಿದ್ದಾರೆ. ಅದನ್ನು ಬಿಟ್ಟು ನಮ್ಮ ವಿಚಾರಗಳನ್ನು ಹೇಳಿ ಹೊರಗೆ ಹೋಗಿಬಿಡುತ್ತೇವೆ. ಇದು ಆಗಬಾರದು. ನಮ್ಮ ವಿಷಯ ಬರದಿದ್ದಾಗಲೂ ಕೂಡ ಇಲ್ಲಿ ಕುಳಿತುಕೊಂಡು ಬೇರೆಯವರು ಮಾತನಾಡುವಂಥ ಸಂದರ್ಭದಲ್ಲಿ ಆಸಕ್ತಿಯಿಂದ ಕೇಳಬೇಕು. ಹಿರಿಯ ಸದಸ್ಯರು ಮಾತನಾಡುವಂಥ ವಿಷಯಗಳನ್ನು ಅವಲೋಕನ ಮಾಡಿದರೆ ಇನ್ನೂ ಹೆಚ್ಚು ತಿಳಿವಳಿಕೆ ನಮಗಾಗುತ್ತದೆ. ಜೊತೆಗೆ ನಾವು ಕೂಡ ಒಳ್ಳೆಯ ಪಾರ್ಲಿಮೆಂಟೇರಿಯನ್ನಾಗಿ ಬೆಳೆಯುವುದಕ್ಕೆ ಸಾಧ್ಯವಿದೆ. ಆ ದಿಶೆಯಲ್ಲಿ ಇದರ ಹೆಚ್ಚು ಅವಲೋಕನ ಮಾಡಬೇಕು ಮತ್ತು ಗೈರು ಹಾಜರು ಆಗುವುದಕ್ಕೆ ಅವಕಾಶ ಕೊಡಲಾರದೆ ನೂರಕ್ಕೆ ನೂರರಷ್ಟು ಹಾಜರಾತಿ ಇರುವ ರೀತಿಯಲ್ಲಿ ತಾವು ನಡೆದುಕೊಂಡರೆ ಈ ಸದನಕ್ಕೆ ಗೌರವ ಬರುತ್ತದೆ. ಏಕೆಂದರೆ ಈ ಸದನ ತನ್ನದೇ ಆದಂಥ ವೈಶಿಷ್ಟವನ್ನು ಹೊಂದಿದಂಥ ಸದನ. ಇದಕ್ಕೆ ಹೆಚ್ಚು ಗೌರವ ಬರಲಿಕ್ಕೆ ಸಾಧ್ಯವಿದೆ. ಬೇರೆ ಬೇರೆ ಸದನಗಳನ್ನು ನೋಡಿದಾಗ ಕರ್ನಾಟಕ ವಿಧಾನ ಸಭೆಯ ಈ ಸದನ ಅತ್ಯಂತ ಹೆಚ್ಚು ಗೌರವಯುತವಾಗಿ ನಡೆದುಕೊಂಡಿದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಆ ದಿಶೆಯಲ್ಲಿ ತಾವೆಲ್ಲರೂ ಸ್ಪಂದಿಸಿ. ಈ ಸದನಕ್ಕೆ ಗೌರವ ಕೊಡಬೇಕೆನ್ನುವ ಮಾತನ್ನು ಹೇಳಿ. ತಾವೆಲ್ಲರೂ ಇವೊತ್ತು ನನಗೇನು ಈ

ಜವಾಬ್ದಾರಿಯನ್ನು ಕೊಟ್ಟಿದ್ದೀರಿ. ನಾನು ಪ್ರಮಾಣಿಕವಾಗಿ ಈ ಜವಾಬ್ದಾರಿಯನ್ನು ತೆಗೆದುಕೊಂಡು ನಿಮ್ಮೆಲ್ಲರ ಆಶಯಗಳಿಗೆ ಸ್ಪಂದಿಸುವಂಥ ರೀತಿಯಲ್ಲಿ ಸಭಾಧ್ಯಕ್ಷನಾಗಿ ಕಾರ್ಯನಿರ್ವಹಿಸುತ್ತೇನೆಂದು ಹೇಳಿ. ತಮಗೆ ಮತ್ತೊಮ್ಮೆ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಈಗ ಸದನವನ್ನು ನಾಳೆ ಮಧ್ಯಾಹ್ನ 12–15ಕ್ಕೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 1 ಗಂಟೆ 58 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 6ನೇ ಜೂನ್ 2008 ರ ಶುಕ್ರವಾರದಂದು ಮಧ್ಯಾಹ್ನ 12–15 ಗಂಟೆಗೆ ಸೇರಲು ನಿಶ್ಚಯಿಸಿತು)